ದಿನಾಂಕ 20-9-2025 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ.ವಿ.ಎಂ. ವಕೀಲರಿಂದಃ-

27. ದಾವಾ ಬಿ ಸ್ವತ್ತು ಮುನಿಸಿಪಲ್ ಸ್ವತ್ತು ಎಂದು ಇದ್ದು , ಈ ಹಿಂದೆ ಸದರಿ ಸ್ವತ್ತು ಕೃಷಿ ಜಮೀನು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್‌ನಲ್ಲಿ ಸದರಿ ಸ್ವತ್ತು ಕಾನೂರು ಗ್ರಾಮದ ಸರ್ವೆ ನಂ 15 ಎಂದು ಇತ್ತು ಎಂದು ನಮೂದಿಸಿದ್ದೆ ಎಂದರೆ ಸರಿ. ಸದರಿ ಸ್ವತ್ತು ಯಾವಾಗ ಅಲಿನೇಷನ್ ಅಗಿ ಮುನಿಸಿಪಲ್ ಸ್ವತ್ತು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 15 ಆಗುವ ಪೂರ್ವದಲ್ಲಿ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿಯು ಮುನಿಸಿಪಾಲಿಟಿ ಸ್ವತ್ತು ಎಂದು ನುಡಿಯುತ್ತಾರೆ. ಸದರಿ ಸ್ವತ್ತು 1 ನೇ ಪ್ರತಿವಾದಿಯ ಜನಕ ತಂದೆಯಾದ ಎಸ್.ಹಾಲಪ್ಪರವರ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ನಂತರ ಮೇಲೆ ಹೇಳಿದ ಸ್ವತ್ತನ್ನು ಕೃಷಿಯೇತರ ಬಳಕೆಗಾಗಿ ಬದಲಾವಣೆ ಮಾಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಲಿನೇಷನ್ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ.

28. ಕಾನೂರು ಗ್ರಾಮದ ಸರ್ವೆ ನಂಬರು 15 ರಲ್ಲಿ ಒಟ್ಟು ವಿಸ್ತೀರ್ಣ 5 ಎಕರೆ ಇದ್ದು 1 ನೇ ಪ್ರತಿವಾದಿಯ ತಂದೆಯವರು ಆ ಪೈಕಿ 1 ಎಕರೆ ಜಮೀನನ್ನು ಅಲಿನೇಷನ್ ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ 1 ನೇ ಪ್ರತಿವಾದಿಯ ಜನಕ ತಂದೆಯವರು ಸದರಿ ಸ್ವತ್ತಿನಲ್ಲಿ 99*250 ಅಡಿ ವಿಸ್ತೀರ್ಣದ ಆಸ್ತಿಯನ್ನು 1 ನೇ ಪ್ರತಿವಾದಿಯ ಹೆಸರಿಗೆ ಅವರ ಮೈನರ್ ಗಾರ್ಡಿಯನ್ ಕಮಲಮ್ಮ ಎಂದು ತೋರಿಸಿ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಚಿಕ್ಕ ವಯಸ್ಸಿನಿಂದಲೂ ಕಮಲಮ್ಮರವರ ಹೆಸರಿನಲ್ಲಿ ಬೆಳೆದಿದ್ದರಿಂದ ಸದರಿಯವರನ್ನು ಮೈನರ್ ಗಾರ್ಡಿಯನ್ ಎಂದು ತೋರಿಸಿ ಖಾತೆ ಬದಲಾವಣೆ ಮಾಡಿಸಿದ್ದರು ಎಂದರೆ ನನ್ನ ಚಿಕ್ಕಮ್ಮ ಯಾವ ವಿಷಯವನ್ನು ಹೇಳಿರಲಿಲ್ಲ ಎಂದು ನುಡಿಯುತ್ತಾರೆ.

29. ಸದರಿ ಸ್ವತ್ತಿನಲ್ಲಿ ಮನೆ ಮತ್ತು 9 ಮಳಿಗೆಗಳನ್ನು 1 ನೇ ಪ್ರತಿವಾದಿಯ ಜನಕ ತಂದೆಯವರು ಕಟ್ಟಿಸಿದ್ದರು ಎಂದರೆ ಸಾಕ್ಷಿಯು ಯಾರು ಕಟ್ಟಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ ಬಾಡಿಗೆದಾರರು ಇದ್ದರು ಎಂದು ನುಡಿಯುತ್ತಾರೆ. ಸದರಿ

ಸ್ವತ್ತಿನಲ್ಲಿ ಮನೆ ಕಟ್ಟುವಾಗ ಯಾರ ಹೆಸರಿನಲ್ಲಿ ಪರವಾನಗಿ ಪಡೆದುಕೊಳ್ಳಲಾಗಿತ್ತು ಎಂದುನನಗೆ ಗೊತ್ತಿಲ್ಲ. 1 ನೆ ಪ್ರತಿವಾದಿಯ ಜನಕ ತಂದೆಯವರ ಹೆಸರಿನಲ್ಲಿ ಪರವಾನಗಿ ಪಡೆದುಕೊಂಡು ಸದರಿ ಸ್ವತ್ತಿನಲ್ಲಿ ಮನೆ ಮತ್ತು ಮಳಿಗೆಗಳನ್ನು ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ನಾನು ಸ್ವತ್ತು ನಮ್ಮದು ಎಂದು ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆದು ನಮ್ಮ ಚಿಕ್ಕಮ್ಮರವರು ಹೇಳಿದ್ದರಿಂದ ಸದರಿ ಸ್ವತ್ತು ನಮ್ಮದು ಎಂದು ಪ್ರತಿಪಾದಿಸುತ್ತಿದ್ದೇವೆ ಎಂದು ನುಡಿಯುತ್ತಾರೆ. ಸದರಿ ವಿಚಾರ ಸುಳ್ಳು ಎಂದರೆ ಸರಿಯಲ್ಲ.

30. ಕಮಲಮ್ಮರವರು ಜಮೀನಿನ ಸಾಗುವಳಿ ಮತ್ತು ಆರೋಗ್ಯ ವೆಚ್ಚಕ್ಕಾಗಿ ಸಾಲ ಮಾಡಿದ್ದು ಸದರಿ ಸಾಲದ ತೀರುವಳಿಗಾಗಿ ದಾವಾ ಎ ಐಟಂ ನಂ 1 ನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಮಲಮ್ಮರವರಿಗೆ ಬಾಡಿಗೆ ಆದಾಯ ಬರುತ್ತಿದ್ದರಿಂದ ಸಾಲ ಮಾಡುವ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಬಿ ಸ್ವತ್ತಿನಲ್ಲಿ ಮಳಿಗೆಗಳನ್ನು ಬಾಡಿಗೆ ಕೊಟ್ಟಿದ್ದು ದಾವಾ ಎ ಸ್ವತ್ತಿನಲ್ಲಿ ಬಾಡಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಎ ಸ್ವತ್ತಿನಲ್ಲಿ ಸ್ವಲ್ಪ ಭಾಗವನ್ನು ಬಾಡಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ.

31. ಕಮಲಮ್ಮರವರು ದಿನಾಂಕ 23.11.2011 ರಂದು ದಾವಾ ಎ ಐಟಂ ನಂ 1 ಸ್ವತ್ತನ್ನು 1 ನೇ ಪ್ರತಿವಾದಿಗೆ 9,60,000-00 ಗಳಿಗೆ ಮಾರಾಟ ಮಾಡಿ ಶುದ್ಧಕ್ರಯಪತ್ರ ಬರೆದು ನೋಂದಾಯಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮೋಸದಿಂದ ಬರೆಯಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ . ಕಮಲಮ್ಮರವರಿಗೆ ಬ್ಯಾಂಕಿನಲ್ಲಿ ಸಾಲ ಇತ್ತು ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ಈಗಲೂ ಕಮಲಮ್ಮರವರ ಹೆಸರಿನಲ್ಲಿ ಸಾಲ ಇದೆ ಎಂದರೆ ಸರಿಯಲ್ಲ. ದಾವಾ ಬಿ ಸ್ವತ್ತನ್ನು ದಿನಾಂಕ 23.11.2011 ರಂದು 2,60,000-00 ಗಳಿಗೆ ಕಮಲಮ್ಮರವರು 1 ನೇ ಪ್ರತಿವಾದಿಗೆ ಕ್ರಯಪತ್ರವನ್ನು ಬರೆದು ನೋಂದಾಯಿಸಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಕಮಲಮ್ಮರವರು ಅನಾರೋಗ್ಯದಿಂದ ಬಳಲುತ್ತಿರುವಾಗ ಮೋಸದಿಂದ ಕ್ರಯಪತ್ರವನ್ನು ಬರೆಯಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ಕಮಲಮ್ಮರವರು ಮಾರ್ಚ್ 2013 ರಲ್ಲಿ ಮರಣಹೊಂದಿರುತ್ತಾರೆ. ದಿನಾಂಕ ನನಗೆ ನೆನಪಿಲ್ಲ. ಸಂಕ್ರಾತಿ ಸಮಯದಲ್ಲಿ ಮರಣ ಹೂಂದಿರುತ್ತಾರೆ. ಸದರಿಯವರು ಜನವರಿ ತಿಂಗಳಿನಲ್ಲಿ ಮರಣ ಹೊಂದಿರುತ್ತಾರೆ ಎಂದರೆ ನನಗೆ ತಿಳಿದಂತೆ ಮಾರ್ಚ್ ನಲ್ಲಿ ಮರಣ ಹೊಂದಿರುತ್ತಾರೆ.

32. ಕ್ರಯಪತ್ರವನ್ನು ಕಮಲಮ್ಮರವರು ಬರೆದುಕೊಡುವಾಗ ಉತ್ತಮ ಆರೋಗ್ಯ ಹೊಂದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಸ್ತಾವೇಜಿನ ಸಾಕ್ಷಿದಾರರು ಕಮಲಮ್ಮರವರು ಉತ್ತಮ ಆರೋಗ್ಯ ಹೊಂದಿರಲಿಲ್ಲ ಎಂದು ನುಡಿಯುತ್ತಾರೆ. ಯಾವಾಗ ದಸ್ತಾವೇಜಿನ ಸಾಕ್ಷಿದಾರರು ನನಗೆ ಕಮಲಮ್ಮರವರ ಆರೋಗ್ಯದ ಬಗ್ಗೆ ಹೇಳಿದ್ದರು ಎಂದು ನನಗೆ ನೆನಪಿಲ್ಲ. ಕ್ರಯಪತ್ರ ಬರೆದುಕೊಟ್ಟ ಎಷ್ಟು ದಿನಗಳ ನಂತರ ಸದರಿ ವಿಚಾರ ಹೇಳಿರುತ್ತಾರೆ ಎಂದು ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಕ್ರಯಪತ್ರ ಬರೆದುಕೊಟ್ಟ ಒಂದೆರಡು ತಿಂಗಳಿನಲ್ಲಿ ಹೇಳಿರಬಹುದು ಎಂದು ನುಡಿಯುತ್ತಾರೆ . ನನಗೆ ವಿಚಾರ ತಿಳಿದು ಬಂದ ನಂತರ ನಾನು ದಾವೆಯನ್ನು ದಾಖಲಿಸಿಲ್ಲ ಎಂದರೆ ಸರಿ.

33. ದಿನಾಂಕ 23.9.2013 ರಂದು ದಾವಾ ಎ ಐಟಂ ನಂ1 ರ ಸ್ವತ್ತಿಗೆ ಸಂಬಂಧಿಸಿ ಜಂಟಿ ಅಭಿವೃದ್ಧಿ ಕರಾರನ್ನು ಮಾಡಿಕೊಡಲಾಗಿತ್ತು ಎಂದರೆ ಸರಿ. ಸಾಕ್ಷಿಗೆ ದಿನಾಂಕ 23.9.2013 ರ ಜಂಟಿ ಅಭಿವೃದ್ಧಿ ಕರಾರನ್ನುತೋರಿಸಿದ್ದು ಸಾಕ್ಷಿ ತನ್ನ ಸಹಿ ಗುರುತಿಸಿರುತ್ತಾರೆ . ಸದರಿ ದಾಖಲೆಯನ್ನು ನಿಡಿ 1 ಎಂದು ಸಾಕ್ಷಿ ಸಹಿಯನ್ನು ನಿಡಿ 1 (ಎ) ಎಂದು ಗುರುತಿಸಲಾಯಿತು. ಅದೇ ದಿನ ನನಗೆ ಸೇರಿದ ಸರ್ವೆ ನಂ 116/1 ರ 4 ಎಕರೆ ಜಮೀನಿನ ಪೈಕಿ 4 ಎಕರೆಗಳನ್ನೂ ಸಹಾ ಜಂಟಿ ಅಭಿವೃದ್ಧಿ ಕರಾರನ್ನು ಮಾಡಿಕೊಡಲಾಗಿತ್ತು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನನಗಾಗಲೀ, 2 ನೇ ವಾದಿಗಾಗಲೀ ಹಕ್ಕು, ಸ್ವಾಧೀನ ಇಲ್ಲದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**<u>7 ನೇ ಪ್ರತಿವಾದಿಗಳ ಪರ ಶ್ರೀ ಕೆ.ಜಿ.ಪಿ. ವಕೀಲರಿಂದಃ-</u>**

**21**

**7** ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.

ಓ.ಹೇ.ಕೇ.ಸರಿಯಿದೆ.

(ತೆ.ನ್ಯಾ.ಸಾ.ಹೇ.ಬೆ.ಮಾಡಲಾಯಿತು).

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.